## ಮಾಗಡಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

C.C. 291/2013

CW-3/PW-1

| | | |
|---|---|---|
| ಹೆಸರು | ಃ- | ಕೊಟಪ್ಪ ಗೌಡ |
| ತಂದೆ/ಗಂಡನ ಹೆಸರು | ಃ- | ನರಸಪ್ಪ |
| ವಯಸ್ಸು | ಃ- | 50 ವರ್ಷ |
| ವೃತ್ತಿ | ಃ- | ವ್ಯವಸಾಯ |
| ವಾಸ ಸ್ಥಳ | ಃ- | ಬೆಳಗುಂಭ ,ಮಾಗಡಿ ತಾಲ್ಲೂಕು |
| ದಿನಾಂಕ | ಃ- | 17-02-2020 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನನಗೆ ಈ ಪ್ರಕರಣದ ವಿಷಯವಾಗಿ ಯಾವುದೇ ಮಾಹಿತಿ ಇರುವುದಿಲ್ಲ ನನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ, ನಾನು ಪೋಲಿಸ್ ಠಾಣೆಗೆ ಹೋದಾಗ ಒಂದು ದಾಖಲೆಗೆ ನನ್ನ ಸಹಿಯನ್ನು ಮಾತ್ರ ಪಡೆದಿರುತ್ತಾರೆ. ನನ್ನ ಸಹಿ ಇರುವ ದಾಖಲೆ ಪಂಚನಾಮೆಯಾಗಿದ್ದು ಅದನ್ನು ಈಗ ನಿಪಿ-1 ಎಂದು ಗುರುತಿಸಿ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ)ಎಂದು ಗುರುತಿಸಲಾಯಿತು. ದರಿ ದಾಖಲೆಯಲ್ಲಿ ಬರೆದ ವಿಚಾರ ಗೊತ್ತಿರುವುದಿಲ್ಲ.

(ಮಾನ್ಯ ಎಪಿಪಿ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

1. ದಿನಾಂಕ 19-10-2012 ರಂದು ಪೋಲಿಸರು ಸಾವನದುರ್ಗ ಅರಣ್ಯಪ್ರದೇಶದ ಜೋಡಿಗಟ್ಟೆ ಗೇಟ್ ನಿಂದ ನವಿಲುಕಲ್ಲಿಗೆ ಹೋಗುವ ಕಾಡುದಾರಿಯ ರಸ್ತೆಯ ಬಳಿ ಮಹಜರು ಮಾಡಲು ಬಂದಾಗ ನನ್ನನ್ನು ಪಂಚನಾಗಿ ಸಹಕರಿಸುವಂತೆ ಕರೆದಿದ್ದರು ಎಂದರೆ ಸರಿಯಲ್ಲ. ಆಸಮಯದಲ್ಲಿ ಪಿರ್ಯಾದುದಾರರು ತೋರಿಸಿದ ಸ್ಥಳವನ್ನು ಪರಿಶೀಲನೆ ಮಾಡಿ ನಿಪಿ-1 ರಂತೆ ಪಂಚನಾಮೆ ಮಾಡಿ ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿರುವ ಎಲ್ಲಾ ವಿಚಾರ ಮತ್ತು ಪಂಚನಾಮೆಯ ವಿಚಾರ ನನಗೆ ಗೊತ್ತಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು** ಹಾಜರಿದ್ದು ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ನುಡಿದಿರುತ್ತಾರೆ.

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಮಾಗಡಿ